ಪಿ. ಡಬ್ಲ್ಯೂ ಃ 1

**ಸಾಕ್ಷಿಗೆ ದಿನಾಂಕ 02.06.2026 ರಂದು ಪ್ರಮಾಣ ವಚನ ನೀಡಲಾಯಿತು.**

**ಮುಂದುವರೆದ ಪಾಟೀಸವಾಲುಃ ಆರೋಪಿ ಪರ ಶ್ರೀ ವಕೀಲರಿಂದಃ**

ದಿನಾಂಕ 04.06.2022 ರಂದು ಆರೋಪಿ ನನಗೆ ಚೆಕ್ಕು ಕೊಟ್ಟಿರುತ್ತಾರೆ. ಸದರಿ ವಿಚಾರವನ್ನು ದೂರಿನಲ್ಲಿ ಹೇಳಿರುತ್ತೇನೆ. ಬಡ್ಡಿ ಹಣವನ್ನು ಸೇರಿಸಿ ಆರೋಪಿಯಿಂದ ನಾನು ಚೆಕ್ಕು ಪಡೆದುಕೊಂಡಿಲ್ಲ. 2022 ರಿಂದ ಆರೋಪಿ ನನ್ನ ಜೊತೆ ಹಣಕಾಸಿನ ವ್ಯವಹಾರ ಮಾಡುತ್ತಿದ್ದೇನೆ. ನಮ್ಮ ಮನೆಯ ಸಂಖ್ಯೆ 545 ಎಂದರೆ ಸರಿ. ದಿನಾಂಕ 13.05.2017 ರಂದು ಆರೋಪಿ ನನ್ನಿಂದ 1 ಲಕ್ಷ ಸಾಲ ಪಡೆದು ಆನ್ ಡಿಮಾಂಡ್ಯ್ ಪ್ರನೋಟ್ ಬರೆದುಕೊಟ್ಟಿದ್ದರು ಎಂದರೆ ಸರಿ. ಸಾಕ್ಷಿಗೆ ಆನ್ ಡಿಮಾಂಡ್ಯ ಪ್ರನೋಟ್ ನ್ನು ತೋರಿಸಿಸಲಾಗಿದ್ದು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಡಿ-01 ಎಂದು ಗುರುತಿಸಲಾಯಿತು. ಸದರಿ ವ್ಯವಹಾರ ನಡೆಯುವಾಗ ಯಾವ ದಾಖಲೆಯನ್ನು ಪಡೆದುಕೊಂಡಿದ್ದಾರೆ ನನಗೆ ಗೊತ್ತಿಲ್ಲ, ನನ್ನ ಗಂಡನಿಗೆ ಗೊತ್ತು. ನನ್ನ ಗಂಡ ಸದರಿ ವ್ಯವಹಾರದ ಭದ್ರತೆಗಾಗಿ ಆರೋಪಿಯಿಂದ ಖಾಲ ಚೆಕ್ಕು ಪಡೆದುಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಆರೋಪಿ ಸದರಿ 1 ಲಕ್ಷ ಅಸಲು ಹಾಗೂ ಬಡ್ಡಿ ಹಣವನ್ನು ನನ್ನ ಗಂಡನಿಗೆ ಮರು ಪಾವತಿ ಮಾಡಿರುತ್ತಾರೆ ಎಂದರೆ ಸರಿ. ಹಣ ಮರುಪಾವತಿ ಮಾಡಿದ ನಂತರ ನನ್ನ ಗಂಡ ಯಾವ ದಾಖಲೆಗಳನ್ನು ಆರೋಪಿಗೆ ಹಿಂದಿರುಗಿಸಿದ್ದಾರೆ ನನಗೆ ಗೊತ್ತಿಲ್ಲ ಎಂದರೆ ಸರಿ. ಭದ್ರತೆಗಾಗಿ ಪಡೆದುಕೊಂಡ ಖಾಲಿ ಚೆಕ್ಕು ಆರೋಪಿ ಕೇಳಿದಾಗ ನನ್ನ ಗಂಡ ಚೆಕ್ಕು ಕಳೇದು ಹೋಗಿರುತ್ತದೆ ಹುಡುಕಿ ಕೊಡುತ್ತೇನೆ ಎಂದು ಹೇಳಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನನ್ನ ಗಂಡ ತೀರಿಕೊಂಡಿದ್ದರು, ಮನೆಯಲ್ಲಿದ್ದ ಖಾಲಿ ಚೆಕ್ಕನ್ನು ನಾನು ದುರುಪಯೋಗ ಪಡಿಸಿಕೊಂಡು ಸುಳ್ಳು ಪ್ರಕರಣ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ.

ನನ್ನ ಗಂಡ ಬದುಕಿದ್ದಾಗ ನಡೆಸಿದ್ದ ಹಣಕಾಸಿನ ವ್ಯವಹಾರ ನನಗೆ ಗೊತ್ತಿರುತ್ತದೆ ಎಂದರೆ ಸರಿ. ನಿಪಿ-01 ಚೆಕ್ಕನ್ನುತಜ್ಞರ ಅಭಿಪ್ರಾಯಕ್ಕೆ ಕಳುಹಿಸಲು ನನಗೆ ತೊಂದರೆ ಇಲ್ಲ. ದಿನಾಂಕ 23.06.2023 ರಂದು ಆರೋಪಿಗೆ ನೋಟಿಸು ಕೊಟ್ಟಿರುತ್ತೇನೆ. ನಾನು ನೀಡಿದ ನೋಟಿಸು ಜಾರಿಯಾಗಿಲ್ಲ, ನಿಪಿ-03 (ಬಿ) ಅನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಚೆಕ್ಕನ ಸಂಖ್ಯೆ ಗೊತ್ತಿಲ್ಲ, ಆರೋಪಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ನ ಚೆಕ್ಕು ಕೊಟ್ಟಿರುತ್ತಾರೆ. ಆರೋಪಿ ನನ್ನಿಂದ 2 ½ ಲಕ್ಷ ಹಣ ಪಡೆದುಕೊಂಡಿಲ್ಲ ನಾನು ಚೆಕ್ಕನ್ನು ದುರುಪಯೋಗ

ಪಡಿಸಿಕೊಂಡು ಸುಳ್ಳು ಪ್ರಕರಣ ದಾಖಲು ಮಾಡಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.**

**ಓ.ಹೇ.ಕೇ.ಸರಿ ಇದೆ.**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಧೀಶರು, ಹುಣಸೂರು.**